**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ:ತಳವಾರ್ ಸಾಬಣ್ಣ, ಇವರು ನಿಯಮ 330 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಸೂಚನೆ:**

ಅತ್ಯಂತ ಹಿಂದುಳಿದ ಜಾತಿಗಳನ್ನು ಒಳಗೊಂಡ ಪ್ರವರ್ಗ-1 ಗುಂಪಿಗೆ ಜನಸಂಖ್ಯೆ, ಆರ್ಥಿಕ-ಸಾಮಾಜಿಕ-ಶೈಕ್ಷಣಿಕ ಹಿನ್ನಲೆ ಪರಿಗಣಿಸದೆ ಅವೈಜ್ಞಾನಿಕವಾಗಿ ಮೀಸಲಾತಿ ಪ್ರಮಾಣವನ್ನು ನಿಗದಿಪಡಿಸಿರುವುದು ಮತ್ತು ಆದರಿಂದ ತೀರಾ ಹಿಂದುಳಿದ ಜಾತಿಗಳಿಗೆ ಮೂವತ್ತು ವರ್ಷಗಳಿಂದ ಆಗುತ್ತಿರುವ ಅನ್ಯಾಯದ ಕುರಿತು.

**ಉತ್ತರ:**

ನ್ಯಾಯಮೂರ್ತಿ ಓ ಚಿನ್ನಪ್ಪ ರೆಡ್ಡಿ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದಲ್ಲಿನ ಹಿಂದುಳಿದ ವರ್ಗಗಳನ್ನು ಪ್ರವರ್ಗವಾರು ವಿಂಗಡಿಸಿ ಸರ್ಕಾರಕ್ಕೆ 1994 ರಲ್ಲಿ ವರದಿಯನ್ನು ಸಲ್ಲಿಸಿರುತ್ತದೆ. ಸದರಿ ವರದಿಯಲ್ಲಿ ಪ್ರವರ್ಗ-1 ರಲ್ಲಿ ಬರುವ ಸಮುದಾಯಗಳನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ತೀರಾ ಹಿಂದುಳಿದ ವರ್ಗಗಳೆಂದು ಗುರುತಿಸುವ ಪೂರ್ವದಲ್ಲಿ ಆಯೋಗವು ಆಯ್ದ 525 ಗ್ರಾಮಗಳಲ್ಲಿ ಪರೀಕ್ಷಾರ್ಥ ಸಮೀಕ್ಷೆ ನಡೆಸಲಾಗಿರುತ್ತದೆ ಹಾಗೂ ಸರ್ಕಾರದ ವಿವಿಧ ಇಲಾಖೆಗಳು, ವಿಶ್ವವಿದ್ಯಾಲಯಗಳು, ಸ್ಥಳೀಯ ಸಂಸ್ಥೆಗಳು ಇತ್ಯಾದಿ ಮೂಲಗಳಿಂದ ಸಾಮಾಜಿಕ ಹಾಗೂ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಅಂಕಿ-ಅಂಶಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿರುತ್ತದೆ.

ಮುಂದುವರೆದು, ಹಿಂದುಳಿದ ವರ್ಗಗಳನ್ನು ಗುರುತಿಸುವಾಗ ಆಯೋಗವು ಆಯಾ ಜಾತಿ/ ಸಮುದಾಯದ ಹಿಂದುಳಿದಿರುವಿಕೆ, ಸಮುದಾಯದ ಗಾತ್ರ ಮತ್ತು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವಿಕೆಯನ್ನು ಪರಿಗಣಿಸಿ ಪ್ರವರ್ಗ–I ರಲ್ಲಿ ಜಾತಿ/ ಸಮುದಾಯಗಳನ್ನು ಗುರುತಿಸಲಾಗಿರುತ್ತದೆ.

ಅದರಂತೆ, ನ್ಯಾಯಮೂರ್ತಿ ಓ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನಾಧರಿಸಿ ಶೈಕ್ಷಣಿಕ ಮತ್ತು ಉದ್ಯೋಗದ ಮೀಸಲಾತಿಗಾಗಿ ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳನ್ನು ಪ್ರವರ್ಗ-I, ಪ್ರವರ್ಗ-II (ಎ), ಪ್ರವರ್ಗ-II(ಬಿ) ಪ್ರವರ್ಗ-III (ಎ) ಮತ್ತು ಪ್ರವರ್ಗ-III (ಬಿ) ಎಂದು ವರ್ಗೀಕರಿಸಿ ಸರ್ಕಾರದ ಆದೇಶ ಸಂಖ್ಯೆ: SWD 150 BCA 94 dated 17.09.1994 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ. ಪ್ರವರ್ಗವಾರು ಮೀಸಲಾತಿ ಪ್ರಮಾಣ ಈ ಕೆಳಕಂಡಂತಿರುತ್ತದೆ.

| ಪ್ರವರ್ಗ | ಮೀಸಲಾತಿ ಪ್ರಮಾಣ (ಶೇಕಡವಾರು) |
|---|---|
| ಪ್ರವರ್ಗ -I | 4 % |
| ಪ್ರವರ್ಗ -II (ಎ) | 15 % |
| ಪ್ರವರ್ಗ -II (ಬಿ) | 4 % |
| ಪ್ರವರ್ಗ -III (ಎ) | 4 % |
| ಪ್ರವರ್ಗ -III (ಬಿ) | 5 % |
| ಒಟ್ಟು | 32% |

.....2

ಪ್ರೊ. ರವಿವರ್ಮ ಕುಮಾರ್ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು ಸರ್ಕಾರಕ್ಕೆ ಸಲ್ಲಿಸಿದ ಸಲಹೆಗಳ ವರದಿಯನ್ನಾಧರಿಸಿ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002 ರನ್ವಯ ಹಿಂದುಳಿದ ವರ್ಗಗಳನ್ನು ಈ ಕೆಳಕಂಡಂತೆ ವರ್ಗೀಕರಿಸಿ ಮೀಸಲಾತಿ ಪ್ರಮಾಣವನ್ನು ನಿಗದಿಪಡಿಸಲಾಗಿರುತ್ತದೆ.

| ಪ್ರವರ್ಗ | ಮೀಸಲಾತಿ ಪ್ರಮಾಣ (ಶೇಕಡವಾರು) |
|---|---|
| ಪ್ರವರ್ಗ -I | 4 % |
| ಪ್ರವರ್ಗ -II (ಎ) | 15 % |
| ಪ್ರವರ್ಗ -II (ಬಿ) | 4 % |
| ಪ್ರವರ್ಗ -III (ಎ) | 4 % |
| ಪ್ರವರ್ಗ -III (ಬಿ) | 5 % |
| ಒಟ್ಟು | 32% |

ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002ರ ಆದೇಶ ಜಾರಿಯಲ್ಲಿರುತ್ತದೆ.

ಹೀಗಾಗಿ ಅತ್ಯಂತ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿದ ಈ ಸಮುದಾಯಗಳಿಗೆ ವೈಜ್ಞಾನಿಕವಾಗಿ ವರ್ಗೀಕರಿಸಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಕಲ್ಪಿಸಿ ಸಮಾಜದ ಮುಖ್ಯವಾಹಿನಿಗೆ ತರಲಾಗುತ್ತಿದೆ.

**<u>ಸಂಖ್ಯೆ:</u>ಹಿಂವಕ 191 ಬಿಸಿಎ 2024**

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು